ಅನುಬಂಧ -1

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 01 : 21

ಸದಸ್ಯರ ಹೆಸರು : ಶ್ರೀ ಬಾಲಕೃಷ್ಣ ಹೆಚ್.ಸಿ.

ಉತ್ತರಿಸುವ ಸಚಿವರು : ಶ್ರೀ ಗೋವಿಂದ ಎಂ. ಕಾರಜೋಳ, ಸಣ್ಣ ನೀರಾವರಿ ಯೋಜನೆ ಹಾಗೂ ಸಾಂಖ್ಯಿಕ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರಗಳು
ಅ	ರಾಮನಗರ ಜಿಲ್ಲೆಯ ಮಾಗಡಿ ತಾಲೂಕಿನಲ್ಲಿರುವ ವೈ.ಜಿ. ಗುಡ್ಡ ಜಲಾಶಯ ನಿರ್ಮಾಣದ ಕಾರ್ಯವನ್ನು ಯಾವಾಗ ಪ್ರಾರಂಭ ಮಾಡಲಾಯಿತು.	ಕಾಮಗಾರಿಯನ್ನು 1988-89ನೇ ಸಾಲಿನಲ್ಲಿ 435.00 ಲಕ್ಷ ರೂ.ಗಳ ಅಂದಾಜು ವೊತ್ತದೊಂದಿಗೆ ಪ್ರಾರಂಭಿಸಲಾಗಿದೆ.
ಆ	ಈ ಜಲಾಶಯ ನಿರ್ಮಾಣದಲ್ಲಿ ಸರ್ಕಾರ ಕೈಗೊಂಡಿರುವ ಕಾಮಗಾರಿಗಳ ರೂಪುರೇಶೆಗಳೇನು (ವಿವರ ನೀಡುವುದು)	ಈ ಕಾಮಗಾರಿಯು ಕೆಳಕಂಡ ಕೆಲಸಗಳನ್ನು ಒಳಗೊಂಡಿದೆ. 1) ಕೆರೆ ಏರಿ (ಮಣ್ಣಿನ ಏರಿ) - 375 ಮೀ. 2) ಕೋಡಿ (ಕಾಂಕ್ರೀಟ್ ಗೋಡೆ) - 60 ಮೀ. 3) ಬಲದಂಡೆ ನಾಲೆ ಉದ್ದ 5.52 ಕಿ.ಮೀ. 4) ಎಡದಂಡೆ ನಾಲೆ ಉದ್ದ 14.52 ಕಿ.ಮೀ. ಈ ಜಲಾಶಯದ ನೀರಿನ ಸಂಗ್ರಹಣಾ ಸಾಮರ್ಥ್ಯ 2.34 ದಶಲಕ್ಷ ಘನ ಮೀ. ಬಲದಂಡೆ ನಾಲೆಯಿಂದ 90 ಹೆಕ್ಟೇರ್ ಹಾಗೂ ಎಡದಂಡೆ ನಾಲೆಯಿಂದ 467 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲು ಯೋಜಿಸಿದೆ.
ಇ	ಈ ಎಲ್ಲಾ ಕಾಮಗಾರಿಗಳ ಕೆಲಸ ಸಂಪೂರ್ಣವಾಗಿ ಮುಗಿದಿದೆಯೇ?	ಇಲ್ಲ. ಬಲದಂಡೆ ಕಾಲುವೆ 5.52 ಕಿ.ಮೀ. ಪೂರ್ಣಗೊಂಡಿದೆ ಮತ್ತು ಎಡದಂಡೆ ನಾಲೆಯ ಕೆಲಸ 0.00 ಕಿ.ಮೀ.ಯಿಂದ 14.52 ಕಿ.ಮೀ.ವರೆಗೆ ಕಾಲುವೆ ಅಗೆತ, ಸಿ.ಡಿ. ಕಾಮಗಾರಿಗಳು ಪ್ರಗತಿಯಲ್ಲಿವೆ.
ಈ	ಈ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?	2009 ನೇ ಮಾರ್ಚ್ ತಿಂಗಳಲ್ಲಿ ಪೂರ್ಣಗೊಳಿಸಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.